# ನಿಮ್ ಮಗಳ ರಿಸಲ್ಟ್ ಏನಾಯ್ತು?

■ ಗುರು ಪಿ.ಎಸ್.

'ಮಗಳ ರಿಸಲ್ಟ್ ಬಂತು ಕಣ್ರೀ, 90 ಪರ್ಸೆಂಟ್ ಮಾಡಿದ್ದಾಳೆ' ಖುಷಿಯಿಂದ ಫೋನ್ ಮಾಡಿದಳು ಹೆಂಡತಿ. 'ಹೌದಾ! ಅವಳಿಗೆ ಫೋನ್ ಕೊಡು' ಎಂದೆ.. 'ಹಲೋ ಅಪ್ಪಾ,' 'ಕಂಗ್ರಾಟ್ಸ್ ಮಗಳೇ' ಎನ್ನುತ್ತಲೇ, ಅತ್ತ ಮಗಳ ಧ್ವನಿ ಗದ್ಗದಿತವಾಗಿತ್ತು. 'ಅಪ್ಪ, ಮ್ಯಾಥ್ಸ್‌ನಲ್ಲಿ ಕಡಿಮೆ ಬಂದಿದೆ. ಅದೂ 90 ಬಂದಿದ್ರೆ ನನ್ನ ಪರ್ಸೆಂಟೇಜ್ 96ರ ಮೇಲೆ ಆಗಿರೋದು' ಅನ್ನುತ್ತಲೇ ಅಳತೊಡಗಿದಳು. 'ಅಯ್ಯೋ ಕಂದ, ಎಸ್ಸೆಸ್ಸೆಲ್ಸಿ ಗಣಿತದಲ್ಲಿ ನಾನು ತೆಗೆದುಕೊಂಡಿದ್ದಕ್ಕಿಂತ ಡಬಲ್ ಮಾರ್ಕ್ಸ್ ಹೆಚ್ಚು ತಗೊಂಡಿದಿಯಾ' ಅಳಬೇಡ ಎಂದೆ.

ಅಲ್ಲಿಂದ ಶುರುವಾಯಿತು ನೋಡಿ, ಮಗಳ ಸಾಧನೆಯನ್ನ ಗರಿಯಂತೆ ತಲೆ ಮೇಲೆ ಸಿಕ್ಕಿಸಿಕೊಂಡು ಓಡಾಡುವ 'ಚಟ'. ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದ ಮಕ್ಕಳಿರುವ ಸಹೋದ್ಯೋಗಿಗಳಿಗೆ ಫೋನ್ ಮಾಡೋದು, 'ಏನಾಯ್ತು ಸರ್ ನಿಮ್ಮ ಮಗಳ ರಿಸಲ್ಟ್' ಅನ್ನೋದು ಸಾಮಾನ್ಯವಾಯಿತು. ನನ್ನ ಮಗಳಿಗಿಂತ ಅವರ ಮಗ ಅಥವಾ ಮಗಳು ಕಡಿಮೆ ಮಾರ್ಕ್ಸ್ ತೆಗೆದಿದ್ದರೆ ಒಳಗೊಳಗೇ ಖುಷಿ! ನನ್ನ ಮಗಳಿಗಿಂತ ಅವರು ಒಂದೆರಡು ಪರ್ಸೆಂಟೇಜ್ ಹೆಚ್ಚು ಪಡೆದಿದ್ದರೆ, 'ತುಂಬಾ ಒಳ್ಳೆ ರಿಸಲ್ಟ್ ಬಂದಿದೆ ಸರ್, ನಿಮ್ಮ ಮಗಳು ಚೆನ್ನಾಗಿ ಓದಿದ್ದಾಳೆ' ಎಂದು ಮೇಲ್ ಮಾತಿಗೆ ಹೇಳಿದರೂ ಒಳಗೊಳಗೇ ಅದೆಂಥದೋ ಸಂಕಟ!

ಇತ್ತ, ಸಣ್ಣ ಮಗಳದ್ದೂ ರಿಸಲ್ಟ್ ಬಂತು. ಅವಳದ್ದು 94 ಪರ್ಸೆಂಟ್. ಆದರೆ, ಅವಳದ್ದು ಸ್ಟೇಟ್ ಸಿಲಬಸ್. ಅವಳ ಜೊತೆಗೆ ಬಂದ ಸ್ನೇಹಿತೆಯರನ್ನು ಕಂಡಾಗಲೂ ನನ್ನೊಳಗಿನ 'ಪ್ರೌಡ್ ಫಾದರ್' ಎಚ್ಚೆತ್ತುಕೊಳ್ಳುತ್ತಿದ್ದ. 'ಏನಾಯ್ತಮ್ಮ ನಿನ್ನ ರಿಸಲ್ಟು?', '85 ಪರ್ಸೆಂಟ್ ತೆಗೆದಿದ್ದೇನೆ ಅಂಕಲ್'. 'ಪರವಾಗಿಲ್ಲ ಬಿಡು ಚೆನ್ನಾಗಿ ತೆಗೆದಿದ್ದೀಯ, ಮುಂದಿನ ವರ್ಷವಾದರೂ ಚೆನ್ನಾಗಿ ಓದ್ಕೊ' ಎನ್ನುತ್ತಲೇ, ಈ ವರ್ಷ ನೀನು ನನ್ನ ಮಗಳಿಗಿಂತ ಕಡಿಮೆ ತೆಗೆದಿದ್ದೀಯ ಎಂಬ ಮೆಸೇಜ್ ಅನ್ನು ಪರೋಕ್ಷವಾಗಿ ಪಾಸ್ ಮಾಡಿರುತ್ತಿದ್ದೆ!

ಏಳನೇ ತರಗತಿಯವರೆಗೂ ನನ್ನ ಸಣ್ಣ ಮಗಳು ಓದಿದ್ದು ಸರ್ಕಾರಿ ಶಾಲೆಯಲ್ಲಿ, ಕನ್ನಡ ಮಾಧ್ಯಮದಲ್ಲಿ. ಹೈಸ್ಕೂಲ್‌ನಿಂದ ಇಂಗ್ಲಿಷ್ ಮೀಡಿಯಂ. ಆದರೆ, ಅವತ್ತು ಅವಳ ಹೊಸ ಸ್ಕೂಲ್ ಗೆಳತಿಯರ ಜೊತೆಗೆ, ಹಳೆಯ ಶಾಲೆಯ ಅಂದರೆ, ಸರ್ಕಾರಿ ಸ್ಕೂಲ್‌ನ ಗೆಳತಿಯೂ ಬಂದಿದ್ದಳು. ಆದರೆ, ಆ ಹುಡುಗಿಯ ರಿಸಲ್ಟ್ ಕೇಳಬೇಕು ಅಂತ ನನಗನಿಸಲೇ ಇಲ್ಲ. ಆ ಹುಡುಗಿ ನನ್ನ ಮಗಳಿಗಿಂತ ಕಡಿಮೆ ಮಾರ್ಕ್ಸ್ ತೆಗೆದಿದ್ದರೆ ಬೇಜಾರಾಗಬಹುದು ಅಂತ ಒಂದು ಕಡೆ, ಸರ್ಕಾರಿ ಸ್ಕೂಲ್‌ನಲ್ಲಿ ಓದಿದ ಹುಡುಗಿ ಖಂಡಿತವಾಗಿಯೂ ಕಡಿಮೆ ಅಂಕಗಳನ್ನೇ ತೆಗೆದುಕೊಂಡಿರುತ್ತಾಳೆ ಅನ್ನೋ ಅಹಂ ಇನ್ನೊಂದು ಕಡೆ. ಪ್ರೌಡ್ ಫಾದರ್!

ಮನೆಗೆ ಬಂದವರನ್ನು ಮಾತ್ರವಲ್ಲ, ಮನೆಯ ಹತ್ತಿರದ ಅಂಗಡಿಗೆ ಬಂದ ಪರಿಚಯದವರನ್ನೂ ಕೇಳೋದೇ, 'ನಿಮ್ಮ ಮಗಳ ರಿಸಲ್ಟ್ ಏನಾಯ್ತು?'. 'ಎಸ್ಸೆಸ್ಸೆಲ್ಸಿಯಲ್ಲಿ ನನ್ನ ಮಗಳು 95 ಪರ್ಸೆಂಟ್ ತೆಗೆದಿದ್ದಾಳೆ' ಅಂದರು ಪರಿಚಯದವರು. 'ಹೌದಾ! ನಿಮ್ಮ ಮಗಳು ಯಾವ ಸಿಲಬಸ್?' ತಕ್ಷಣಕ್ಕೆ ಕೇಳಿದೆ. 'ಸ್ಟೇಟ್ ಸಿಲಬಸ್'. 'ಓಹ್ ಸ್ಟೇಟ್ ಸಿಲಬಸ್ ಆದರೆ ಈಸಿ ಇರುತ್ತಲ್ಲ ತೆಗೆದಿರುತ್ತಾಳೆ ಬಿಡಿ, ನನ್ನ ಮಗಳದ್ದು ಸಿಬಿಎಸ್ಇ ಸಿಲಬಸ್. ಅದಕ್ಕೆ 90 ಪರ್ಸೆಂಟ್ ಅಷ್ಟೇ ಆಗಿದೆ' ಎನ್ನುತ್ತಾ, ಸಮಾಧಾನಕರ ಬಹುಮಾನವನ್ನ ನಾನೇ ಪಡೆದುಕೊಂಡೆ!

'ಏನ್ ಸರ್, ನಿಮ್ಮ ಮಗನ ರಿಸಲ್ಟ್ ಏನಾಯ್ತು?' ಪಕ್ಕದ ಕ್ರಾಸ್‌ನ ಮಿತ್ರರು ಕಂಡೊಡನೆ ಕೇಳಿದೆ. '80 ಪರ್ಸೆಂಟ್ ಆಗಿದೆ ಸರ್, ಐಸಿಎಸ್ಇ ಸಿಲಬಸ್ ಅಲ್ವಾ, ಟಫ್ ಇರುತ್ತೆ' ಅಂದರು ಅವರು. 'ಹಿ ಹಿ ಹಿ..' ಎಂದು ಹಲ್ಲು ಕಿಸಿಯುತ್ತಾ ಮನದಲ್ಲಿ ಅಂದುಕೊಂಡೆ, 'ಐಸಿಎಸ್ಇ ಆದರೇನು, ಸಿಬಿಎಸ್ಇ ಆದರೇನು, ಎಲ್ಲವೂ ಒಂದೇ ಅಲ್ವಾ, ಸಿಲಬಸ್‌ಗೆ ತಕ್ಕಂತೆ ಪಾಠ, ಪಾಠಕ್ಕೆ ತಕ್ಕಂತೆ ಪ್ರಶ್ನೆಪತ್ರಿಕೆ. ಸಿಲಬಸ್ ಚೇಂಜ್ ಆಗಿಬಿಟ್ಟರೆ ಓದೋದೇನು ಕಡಿಮೆ ಆಗುತ್ತಾ' ನನ್ನ ಸಮರ್ಥನೆಯ ಪರಿ ಮುಂದುವರಿಯಿತು.

ಈಗ ಅಡ್ಮಿಷನ್ ಶುರುವಾಗಿದೆ. 'ಏನ್ರೀ, ನಿಮ್ಮ ಮಗಳನ್ನ ಯಾವ ಕಾಲೇಜಿಗೆ ಸೇರಿಸಿದಿರಿ, ಡೊನೇಷನ್ ಎಷ್ಟು?' ಕೇಳಿದರು ಸಹೋದ್ಯೋಗಿ. 'ಇಂಥ ಕಾಲೇಜಿಗೆ ಸೇರಿಸಿದ್ದೇನೆ. ಡೊನೇಷನ್, ಫೀ ಎಲ್ಲ ಸೇರಿ ಒಂದು ಲಕ್ಷ ಆಯ್ತು, ನಿಮ್ಮ ಮಗನನ್ನು ಎಲ್ಲಿಗೆ ಸೇರಿಸಿದ್ದೀರಿ, 'ಆ ದೊಡ್ಡ ಕಾಲೇಜಿಗೆ ಸೇರಿಸಿದ್ದೇನೆ. ಪಿಯು ಎಜುಕೇಷನ್ ಜೊತೆಗೆ ನೀಟ್, ಜೆಇಇ ಕೋಚಿಂಗ್ ಕೂಡ ಕೊಡ್ತಾರಂತೆ. ಡೊನೇಷನ್, ಫೀ ಎಲ್ಲ ಸೇರಿ ವರ್ಷಕ್ಕೆ 3 ಲಕ್ಷ', 'ಹೌದಾ! ಅಷ್ಟೆಲ್ಲ ದುಡ್ಡು ಕೊಟ್ಟು ಸೇರಿಸೋದೆಲ್ಲ ವೇಸ್ಟ್ ಬಿಡಿ. ಸಣ್ಣ ಕಾಲೇಜಿಗೆ ಸೇರಿಸಿದರೆ ಮಕ್ಕಳು ಚೆನ್ನಾಗಿ ಓದ್ತಾರೆ' ಅಂದೆ. ಪೂರ್ ಫಾದರ್!




ಪ್ರತಿಕ್ರಿಯಿಸಿ: feedback@sudha.co.in